ಸರ್ವಜ್ಞ, ಶಿವಾಜಿ, ದಲಿತ ವಚನಕಾರರ ಜಯಂತಿ ಆಚರಣೆಗೆ ಎಲ್ಲರ ಸಹಕಾರ ಅತಿಮುಖ್ಯ

ಚಳ್ಳಕೆರೆ

ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಇಲ್ಲಿನ ತಾಲ್ಲೂಕು ಕಚೇರಿ ಆವರಣದಲ್ಲಿ ಸೋಮವಾರ ಸರ್ವಜ್ಞ ಜಯಂತಿ, ಶಿವಾಜಿ ಜಯಂತಿ ಮತ್ತು ದಲಿತ ವಚನಕಾರರ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಿದ್ದು, ತಹಶೀಲ್ದಾರ್ ಟಿ.ಸಿ.ಕಾಂತರಾಜು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸರ್ಕಾರ ನಿರಂತರವಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ನಾಡಿನ ಶ್ರೇಷ್ಠ ಮಹಾಪುರಷರನ್ನು ಗೌರವಿಸುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ಬಂದಿದೆ. ಮೂರೂ ಜಯಂತಿಗಳ ಆಚರಣೆಗೆ ತಾಲ್ಲೂಕು ಆಡಳಿತದೊಂದಿಗೆ ಅಧಿಕಾರಿ ವರ್ಗ ಮತ್ತು ಸಮುದಾಯದ ಮುಖಂಡರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ನಗರಸಭೆ ಉಪಾಧ್ಯಕ್ಷ ಟಿ.ವಿಜಯಕುಮಾರ್ ಮಾತನಾಡಿ, ದಲಿತ ವಚನಕಾರರ ಜಯಂತಿ ಆಚರಣೆಗೆ ಮತ್ತಷ್ಟು ಸಮುದಾಯದ ಜನರ ನಿರೀಕ್ಷೆ ಇತ್ತು ಆದರೆ, ತಾಲ್ಲೂಕು ಆಡಳಿತ ನಿಗದಿಯ ಅವಧಿಯಲ್ಲೇ ಕಾರ್ಯಕ್ರಮ ಮಾಡಬೇಕಿದೆ. ಅದ್ದರಿಂದ ಸಮುದಾಯದ ಎಲ್ಲಾ ಮುಖಂಡರು ಸಂಪೂರ್ಣ ಸಹಕಾರ ನೀಡಬೇಕು ಎಂದರು.

ತಾಲ್ಲೂಕು ಪಂಚಾಯಿತಿ ಸದಸ್ಯ ಸಮರ್ಥರಾಯ ಮಾತನಾಡಿ, ಪ್ರತಿ ಕಾರ್ಯಕ್ರಮದಲ್ಲೂ ಸಹ ಹೊಸ ಮುಖಗಳಿಗೆ ಅವಕಾಶ ನೀಡಬೇಕೆಂದರು.

ದಲಿತ ವಚನಕಾರರ ಜಯಂತಿಯನ್ನು ಫೆ.23ರ ಶುಕ್ರವಾರ ಇಲ್ಲಿನ ಸರ್ಕಾರಿ ನೌಕರರ ಭವನದಲ್ಲಿ ಆಚರಿಸಲು ಸಭೆ ತೀರ್ಮಾನಿಸಿತು. ಸರ್ವಜ್ಞ ಜಯಂತಿಯನ್ನು ಫೆ.26ರಂದು, ಶಿವಾಜಿ ಜಯಂತಿಯನ್ನು ಫೆ. 19ರಂದು ಆಚರಿಸಲು ಸಭೆ ನಿರ್ಧರಿಸಿತು. ಪೂರ್ವಭಾವಿ ಸಭೆಗೆ ಮರಾಠ ಸಂಘದ ಅಧ್ಯಕ್ಷರಾದ ನಾರಾಯಣರಾವ್, ಕಾರ್ಯದರ್ಶಿ ಜಿ.ನಾಗರಾಜು ಗುಜ್ಜಾರ್, ಗೌರವಾಧ್ಯಕ್ಷ ವಿಠಲರಾವ್ ಗುಜ್ಜಾರ್, ಸಮುದಾಯದ ಮುಖಂಡ ಅಬಾಸೋಪವರ್ ಮುಂತಾದವರು ಪಾಲ್ಗೊಂಡಿದ್ದರು.

ಸಿರುಗುಪ್ಪ ಶಿವಭಕ್ತರಿಂದ ಮಹಾಶಿವರಾತ್ರಿಯ ಜಾಗರಣೆ

ಸಿರುಗುಪ್ಪ

ತಾಲೂಕಿನಾದ್ಯಂತ ಮಹಾಶಿವರಾತ್ರಿ ಮಹತ್ವದ ಹಬ್ಬ ಪ್ರಮುಖ ಶಿವದೇವಾಲಯಗಳಲ್ಲಿ ಶಿವಭಕ್ತದಿಂದ ವಿಶೇಷವಾಗಿ ಪೂಜೆ, ಜಾಗರಣೆ, ಸಾಂಸ್ಕೃತಿಕ ವಿವಿಧ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಜರುಗಿದವು.

ಸಿರುಗುಪ್ಪದಲ್ಲಿ ಶಾಸಕ ಬಿ.ಎಂ.ನಾಗರಾಜ, ಮಾಜಿ ಶಾಸಕರಾದ ಟಿ.ಎಂ.ಚಂದ್ರಶೇಖರಯ್ಯ, ಎಂ.ಎಸ್. ಸೋಮಲಿಂಗಪ್ಪ, ಸಾಮಾಜಿಕ ಸುಧಾರಣೆಯ ಸಾಕ್ಷರತಾ ಹರಿಕಾರರಾದ ಎ.ಅಬ್ದುಲ್ ನಬೀ, ತಹಶೀಲ್ದಾರರು ಎಂ.ಸುನೀತಾ, ತಾಲೂಕು ಪಂಚಾಯತ್ ಕಾರ್ಯನಿರ್ವಾ ಹಕ ಅಧಿಕಾರಿ ಶಿವಪ್ಪ ಸುಬೇದಾರ್, ನಗರಸಭೆ ಆಯುಕ್ತರಾದ ಮರಿಲಿಂಗಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪಿ.ಡಿ.ಭಜಂತ್ರಿ, ಸಾಕ್ಷರತಾ ಕ್ಷೇತ್ರ ಸಂಯೋಜಕರಾದ ಜೆ.ನಾಗೇಂದ್ರಗೌಡ, ವಿವಿಧಪಕ್ಷಗಳ ಪದಾಧಿಕಾರಿಗಳು ಪ್ರಮುಖ ವ್ಯಕ್ತಿಗಳು ಮಹಾಸ್ವಾಮಿಗಳು ಮಹಾಶಿವರಾತ್ರಿಯ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದರು, ಪ್ರಸಾದ ಸೇವೆ ಕಾಂಗ್ರೆಸ್ ಮುಖಂಡರಾದ ಬಿ.ಎಂ. ವೆಂಕಟೇಶ (ಬುಜ್ಜಿ) ಇವರಿಂದ ಸಾಯಿಬಾಬಾ ಧನ್ ನೆಟವರ್ಕ್ ರವರಿಂದ ಪ್ರಸಾರ, ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ವಕೀಲರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

ಹಿರಿಯೂರು

ವಕೀಲರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕಾರ್ಯಕ್ರಮವನ್ನು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಂತೋಷ್‌ಎಸ್‌ಪಲ್ಲೇದ್‌ರವರು ಉದ್ಘಾಟಿಸಿದರು.

ವಕೀಲರ ಸಂಘದ ಅಧ್ಯಕ್ಷರಾದ ಜಿ.ಎಸ್ .ತಿಪ್ಪೇಸ್ವಾಮಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಗೌರವಾನ್ವಿತ ನ್ಯಾಯಾಧೀಶರಾದ ಮನುಪಟೇಲ್, ಹಿರಿಯವಕೀಲರಾದ ಬಿ.ಎನ್ .ತಿಪ್ಪೇಸ್ವಾಮಿ, ಎಸ್.ಟಿ.ಚಿದಾನಂದಪ್ಪ, ಎಸ್ .ಜಯಣ್ಣ, ಎ.ಪಿ.ಪಿ.ಮಂಜಪ್ಪ, ವಕೀಲರ ಸಂಘದ ಕಾರ್ಯದರ್ಶಿ ಕಲಾವತಿ, ಖಜಾಂಚಿ ಚಂದ್ರಶೇಖರ್, ಸಹಕಾರ್ಯದರ್ಶಿ ಕೆ.ರಾಜಪ್ಪ, ವಕೀಲರ ಸಂಘದ ಮಾಜಿ ಅಧ್ಯಕ್ಷರು ಪಾಂಡುರಂಗಯ್ಯ, ಹಾಗೂ ಎಲ್ಲಾ ಹಿರಿಯ ಹಾಗೂ ಕಿರಿಯ ವಕೀಲರುಗಳು ಹಾಜರಿದ್ದರು.

ಆರಂಭದಲ್ಲಿ ವಕೀಲರಾದ ದೀಪ್ತಿ ಪ್ರಾರ್ಥಿಸಿದರು, ವಕೀಲರಾದ ಚಿತ್ರಲಿಂಗಪ್ಪ ಸ್ವಾಗತಿಸಿದರು, ವಕೀಲರಾದ ಎ.ಮಹಲಿಂಗಪ್ಪ ನಿರೂಪಿಸಿದರು, ಕೊನೆಯಲ್ಲಿ ವಕೀಲರಾದ ಕೆ.ರಾಜಪ್ಪವಂದಿಸಿದರು.

ಹಾನಗಲ್ಲ ಪುರಸಭೆಯ ಉಳಿತಾಯ ಬಜೆಟ್ ಮಂಡನೆ

ಹಾನಗಲ್ಲ

ಪುರಸಭೆ ಪ್ರಸಕ್ತ ವರ್ಷ 10.50ಕೋಟಿಗಳ ಆಯ-ವ್ಯಯದ ಬಜೆಟ್ ಮಂಡಿಸಿದ್ದು, 6.16ಲಕ್ಷರೂಗಳ ಉಳಿತಾಯ ಬಜೆಟ್ ಮಂಡಿಸಿದೆ.

ಆಸ್ತಿ ತೆರಿಗೆ, ನೀರಿನ ಕಂದಾಯ, ಅಭಿವೃದಿ ಶುಲ್ಕಗಳು, ಮಳಿಗೆ ಬಾಡಿಗೆ ಇತ್ಯಾದಿಗಳು ಪುರಸಭೆಯ ಸ್ವಂತ ಆದಾಯದ ಮೂಲಗಳಾಗಿದ್ದು, ಇವುಗಳಿಂದ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. ನೀರು ಶುದ್ದೀಕರಣ ಹಾಗೂ ಸರಬರಾಜಿಗೆ ಹೆಚ್ಚಿನ ಸಂಪನ್ಮೂಲ ವ್ಯಯವಾಗುತ್ತಿದ್ದು, ಒಟ್ಟಾರೆ ನೀರು ಬಳಕೆ ಶುಲ್ಕದಿಂದ 38ಲಕ್ಷ, ಹೊಸ ಸಂಪರ್ಕಗಳು, ದಂಡ ಇತರೆ ಶುಲ್ಕಗಳಿಂದ 3ಲಕ್ಷ, ಆಸ್ತಿ ತೆರಗೆ ವಸೂಲಾತಿಯಿಂದ 44ಲಕ್ಷ, ವಾಣಿಜ್ಯ ಮಳಿಗೆಗಳಿಂದ 20ಲಕ್ಷ, ವ್ಯಾಪಾರ ಪರವಾನಗಿಯಿಂದ 5.50ಲಕ್ಷ, ಸಂತೆ ಮಾರು ಕಟ್ಟೆ ಹರಾಜುಗಳಿಂದ 18ಲಕ್ಷ, ಎಸ್.ಡಬ್ಲೂ.ಎಮ್ ಶುಲ್ಕ 5ಲಕ್ಷ, ಕಟ್ಟಡ ಪರವಾನಗಿಯಿಂದ 3ಲಕ್ಷ, ಅಭಿವೃದ್ದಿ ಶುಲ್ಕಗಳು 17ಲಕ್ಷ, ಸಕ್ಕಿಂಗ ಮಷಿನ್ ಬಾಡಿಗೆ ಆದಾಯ 3 ಹಾಗೂ ಇತರೆ ಮೂಲಗಳಿಂದ 26.80ಲಕ್ಷ ಸೇರಿದಂತೆ ಒಟ್ಟು 183.30 ಲಕ್ಷಗಳನ್ನು ಸ್ವಂತ ಮೂಲದಿಂದ ಆಧಾಯವನ್ನು ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ.

ಮುಖ್ಯಾಂಶಗಳು

- ಪಟ್ಟಣದಲ್ಲಿ ಕಾಂಕ್ರೀಟ್ ರಸ್ತೆ 140ಲಕ್ಷರೂ
- ಕಾಂಕ್ರೀಟ್ ಫಟಾರ ನಿರ್ಮಾಣ 72.50ಲಕ್ಷರೂ
- ಕುಡಿಯುವ ನೀರು ಸರಬರಾಜು 73ಲಕ್ಷರೂ
- ಬೀದಿದೀಪ 55ಲಕ್ಷರೂ
- ಘನತ್ಯಾಜ್ಯ ವಿಲೇವಾರಿ 33ಲಕ್ಷರೂ ಘೋಷಣೆ.

ರಾಜ್ಯ ಹಣಕಾಸು ಯೋಜನೆಯಡಿ 1ಕೋಟಿರೂ ಮುಕ್ತ ನಿಧಿ ಅನುದಾನ, 135 ಲಕ್ಷ ವೇತನ ನಿಧಿ, 1.30ಕೋಟಿ ವಿದ್ಯುತ್ ಬಿಲ್ ಪಾವತಿ ಅನುದಾನ, 25ಲಕ್ಷ ಕುಡಿಯವ ನೀರಿನ ಪರಿಹಾರ ಯೋಜನೆ ಹೀಗೆ ಒಟ್ಟು 3.90 ಕೋಟಿಗಳ ರಾಜಸ್ವ ಅನುದಾನವನ್ನು ರಾಜ್ಯ ಸರ್ಕಾರದಿಂದ ನಿರೀಕ್ಷಿಸಲಾಗಿದೆ, ಸದರಿ ಅನುದಾದಲ್ಲಿ ನಗರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ದಿ ಕಾಮಗಾರಿಗಳು, ಸ್ಮಶಾನಗಳ ಅಭಿವೃದ್ದಿ, ಶವ ವಾಹನ ಖರೀದಿ ಅಂತಹ ಅಭಿವೃದ್ದಿ ಕಾಮಾಗಾರಿಗಳನ್ನು ಕೈಗೊಳ್ಳಲು ಆಯ-ವ್ಯಯದಲ್ಲಿ ತೀರ್ಮಾನಿಸಲಾಗಿದೆ.

ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಬಿಡುಗಡೆಯಾಗುವ ಅನುದಾನವನ್ನು ಒಟ್ಟು 1.50ಕೋಟಿರೂ ಅಂದಾಜಿಸಲಾಗಿದ್ದು, ಸದರಿ ಅನುದಾನದಲ್ಲಿ ನಗರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ. ಸರ್ಕಾರದ ವಿಶೇಷ ಅನುದಾನದಡಿ 100ಲಕ್ಷ, ಆಶ್ರಯ ಬಡಾವಣೆಗಳ ಅಭಿವೃದ್ಧಿಗೆ 150ಲಕ್ಷ, ಪೌರಕಾರ್ಮಿಕರ ಗೃಹಭಾಗ್ಯ ನಿರ್ಮಾಣಕ್ಕೆ 30ಲಕ್ಷಗಳನ್ನು ನಿರೀಕ್ಷಿಸಲಾಗಿದ್ದು, ಈ ಅನುದಾನದಿಂದ ವಿವಿಧ ಅಭಿವೃದ್ದಿ ಕಾರ್ಯಕ್ರಮಗಳಾದ ರಸ್ತೆ, ಚರಂಡಿ, ಸಣ್ಣ ಸೇತುವೆಗಳು, ನೀರು ಸರಬರಾಜು, ಬಡಾವಣೆಗಳ ವಿದ್ಯುತೀಕರಣ ಮಾರ್ಗಗಳು, ಪೌರಕಾರ್ಮಿಕರಿಗೆ ಮನೆಗಳ ನಿರ್ಮಾಣಗಳಂಥ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಆಯ-ವ್ಯಯದಲ್ಲಿ ತೀರ್ಮಾನಿಸಲಾಗಿದೆ.

ಪುರಸಭೆ ಕಚೇರಿ ನಿರ್ವಹಣೆಗಳಾದ ಅಂಚೆ, ದೂರವಾಣಿ, ವಿದ್ಯುತ್, ಮುದ್ರಣ, ಡಿಸೆಲ್, ಲೇಖನ ಸಾಮಗ್ರಿ, ಹೊರ ಗುತ್ತಿಗೆ ವೇತನಗಳು, ಕಛೇರಿಯ ಯಂತ್ರೋಪಕರಣಗಳ ದುರಸ್ತಿ, ಇತ್ಯಾದಿಗಳಿಗೆ 1.78 ಕೋಟಿರೂಗಳಾಗಬಹುದೆಂದು ಅಂದಾಜಿಸಲಾಗಿದೆ. ಮೂಲಭೂತ ಸೌಕರ್ಯಗಳಿಗಾಗಿ ವಿಶೇಷ ಕಾಳಜಿ ಹೊಂದಲಾಗಿದ್ದು, ಇವುಗಳಿಗಾಗಿ 3.98ಕೋಟಿರೂಗಳಾಗಬಹುದೆಂದು ಅಂದಾಜಿಸಲಾಗಿದೆ. ಕಾಂಕ್ರೀಟ ರಸ್ತೆಗಳು, ಗಟಾರ ಮತ್ತು ಚರಂಡಿಗಳು, ಶವ ವಾಹನ ಖರೀದಿ, ಉದ್ಯಾನವನ ನಿರ್ಮಾಣ, ಘನತ್ಯಾಜ್ಯ ವಿಲೇವಾರಿ ಕಾಮಗಾರಿಗಳು, ನೀರು ಸರಬರಾಜು, ಬೀದಿದೀಪ ಹಾಗೂ ವಿದ್ಯುತ್ತೀಕರಣ, ಸ್ಮಶಾನ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಯೋಜನೆ(ಶೇ.24.10)ಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆರ್ಥಿಕ ಸಬಲೀಕರಣಕ್ಕಾಗಿ 20ಲಕ್ಷರೂಗಳನ್ನು ವೆಚ್ಚ ಮಾಡಲು ಉದ್ದೇಶಿಸಿದ್ದು, ಇದರಲ್ಲಿ ಶೈಕ್ಷಣಿಕ ಸಹಾಯಧನ, ಸ್ವಯಂ ಉದ್ಯೋಗಕ್ಕೆ ಸಹಾಯಧನ, ವೈದ್ಯಕೀಯ ವೆಚ್ಚಗಳಿಗೆ ಸಹಾಯಧನ, ನಳ ಜೋಡಣೆ, ವೈಯಕ್ತಿಕ ಶೌಚಾಲಯ ಇತರ ಸೌಲಭ್ಯಗಳಿಗಾಗಿ ಶೇ 40% ರಷ್ಟು ಹಾಗೂ ಸಮುದಾಯ ಶೌಚಾಲಯಗಳು, ಸಮುದಾಯ ಭವನಗಳು, ಅಂಬೇಡ್ಕರ ಜನ್ಮ ದಿನಾಚರಣೆ ಸಹಾಯಧನ ದಂತಹ ಸಮುದಾಯ ಸಂಬಧಿತ ಕಾರ್ಯಕ್ರಮಗಳಿಗೆ ಶೇ.60 ರಷ್ಟನ್ನು ವೆಚ್ಚ ಮಾಡಲಾಗುವುದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ ಇತರೆ ಬಡ ಜನರ ಕಲ್ಯಾಣಕ್ಕಾಗಿ 6ಲಕ್ಷರೂಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ. ಇದರಡಿ ವಿದ್ಯಾರ್ಥಿಗಳಿಗೆ ಸಹಾಯಧನ, ಕೌಶಲ್ಯ ಅಭಿವೃದ್ದಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ವಿಕಲ ಚೇತನರ ಕಲ್ಯಾಣ ಯೋಜನೆ(ಶೇ.3)ಯಡಿ ನಗರ ವ್ಯಾಪ್ತಿಯಲ್ಲಿ ವಿಕಲ ಚೇತನರಿಗಾಗಿ 2.50ಲಕ್ಷರೂಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

ಅಧ್ಯಕ್ಷೆ ಹಸೀನಾಬಿ ನಾಯ್ಕನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉಪಾಧ್ಯಕ್ಷ ಗಣೇಶ ಮೂಡ್ಲಿಯವರ, ಹಣಕಾಸು ಸ್ಥಾಯಿಸಮಿತಿ ಚೇರಮನ್ ಮಾಲತೇಶ ಚಿಕ್ಕಣ್ಣನವರ, ಮುಖ್ಯಾಧಿಕಾರಿ ಎಚ್. ಎನ್.ಭಜಕ್ಕನವರ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬಿಎಸ್‌ವೈ ವಿರುದ್ಧ ಸಿಎಂ ವಾಗ್ದಾಳಿ

ಬೆಂಗಳೂರು

ಎಐಸಿಸಿ ಅಧ್ಯಕ್ಷರಾದ ರಾಹುಲ್ ಗಾಂಧಿ ಮಾಂಸ ಸೇವಿಸಿ ದೇವಾಲಯಕ್ಕೆ ಹೋಗಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ಆರೋಪ. ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪ ಅವರಿಗೆ ರಾಜಕೀಯ ಮಾಡಲು ಬೇರೆ ವಿಚಾರಗಳೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಹಾರ ಪದ್ಧತಿ ಎಂಬುದು ವೈಯಕ್ತಿಕವಾದದ್ದು. ಅದು ಅವರವರಿಗೆ ಸೇರಿದ ವಿಚಾರ. ಇಷ್ಟಕ್ಕೂ ಮಾಂಸ ತಿಂದು ದೇವಾಲಯಕ್ಕೆ ಹೋದರು ಎಂಬುದು ವಿಷಯವೇ ಅಲ್ಲ ಎಂದರು.

ಜೊತೆಗೆ ಯಡಿಯೂರಪ್ಪ ಅವರು ಆರೋಪ ಮಾಡಿರುವಂತೆ ರಾಹುಲ್ ಗಾಂಧಿಯವರು ದೇವಾಲಯಕ್ಕೆ ಹೋಗುವ ಮೊದಲು ಮಾಂಸದ ಆಹಾರ ಸೇವನೆ ಮಾಡಿಯೂ ಇಲ್ಲ, ರಾಹುಲ್ ಗಾಂಧಿಯವರೇ ಇದನ್ನು ಸ್ಪಷ್ಟಪಡಿಸಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಒಂದಲ್ಲ ನೂರು ಬಾರಿ ರಾಜ್ಯಕ್ಕೆ ಬರಲಿ. ಅದರಿಂದ ನಮಗೇನೂ ತೊಂದರೆ ಇಲ್ಲ. ಅವರದ್ದು ಒಂದು ರಾಜಕೀಯ ಪಕ್ಷ. ಹೀಗಾಗಿ ಬರುತ್ತಾರೆ. ಮಾತನಾಡುತ್ತಾರೆ. ಹೋಗುತ್ತಾರೆ ಎಂದು ಹೇಳಿದರು.

ಕಳೆದ ಬಾರಿ ಅವರು ಬೆಂಗಳೂರಿಗೆ ಬಂದಾಗ ನಮ್ಮದು ಹತ್ತು ಪರ್ಸೆಂಟ್ ಸರ್ಕಾರ ಎಂದು ಆರೋಪ ಮಾಡಿದ್ದರು. ಮುಂದಿನ ಬಾರಿ ಬರುವಾಗ ಅದಕ್ಕೆ ದಾಖಲೆ ತರಬೇಕು. ಸುಮ್ಮನೆ ಬಂದು ಆರೋಪ ಮಾಡುವುದು ಸರಿಯಲ್ಲ, ತಮ್ಮ ಆರೋಪಕ್ಕೆ ಸಂಬಂಧಿಸಿದಂತೆ ಮೊದಲು ದಾಖಲೆ ಬಿಡುಗಡೆ ಮಾಡಲಿ ನೋಡೋಣ ಎಂದು ಹೇಳಿದರು.

ನಮ್ಮ ಸರ್ಕಾರದಲ್ಲಿ ಯಾವುದೇ ಕಮಿಷನ್ ವ್ಯವಹಾರ ಮಾಡಿಲ್ಲ. ಅಂತಹ ವ್ಯವಹಾರ ಏನಾದರೂ ನಡೆದಿದ್ದರೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರಬಹುದು. ಹಿಂದಿನ ಬಿಜೆಪಿ ಸರ್ಕಾರ ನೂರು ಪರ್ಸೆಂಟ್ ಕಮಿಷನ್ ಸರ್ಕಾರವಾಗಿತ್ತು ಎಂದು ದೂರಿದರು.

ರಾಹುಲ್ ಗಾಂಧಿಯವರ ಎರಡನೇ ಹಂತದ ರಾಜ್ಯ ಪ್ರವಾಸ ಮುಂಬೈ-ಕರ್ನಾಟಕ ಭಾಗದಲ್ಲಿ ಫೆ. 24ರಿಂದ ಮೂರು ದಿನ ನಡೆಯಲಿದೆ. ಅವರ ಪ್ರವಾಸದಿಂದ ಪಕ್ಷಕ್ಕೆ ಲಾಭವಾಗಲಿದ್ದು, ಪಕ್ಷ ಬಲ ಹೆಚ್ಚಲಿದೆ ಎಂದರು.

ರಾಹುಲ್ ಗಾಂಧಿಯವರು ಹೋದ ಕಡೆ ಕಾಂಗ್ರೆಸ್ ಸೋಲುತ್ತದೆ ಎಂಬ ಬಿಜೆಪಿಯವರ ಹೇಳಿಕೆ ಸರಿಯಲ್ಲ, ಹಾಗಾದರೆ ಗುಜರಾತ್ ನಲ್ಲಿ ನಮ್ಮ ಪಕ್ಷ ಗೆಲುವಿನ ಸಮೀಪ ಹೋಗಲು ಹೇಗೆ ಸಾಧ್ಯವಾಯಿತು ? ಅವರು ಎಐಸಿಸಿ ಅಧ್ಯಕ್ಷರಾದ ಬಳಿಕ ನಮಗೆ ಇನ್ನೂ ಹೆಚ್ಚಿನ ಶಕ್ತಿ ಬಂದಿದೆ ಎಂದು ಸಿದ್ದರಾಮಯ್ಯ ಹೇಳಿದರು.

ನಾನು ಆರನೇ ಶ್ರೀಮಂತ ಮುಖ್ಯಮಂತ್ರಿ, 13 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದೇನೆ ಎಂದು ಸಮೀಕ್ಷೆಯೊಂದು ಹೇಳಿದೆ. ಅದು ನಮ್ಮ ಅವಿಭಕ್ತ ಕುಟುಂಬದ ಆಸ್ತಿಯ ಲೆಕ್ಕ. ಕಳೆದ ಚುನಾವಣೆಯಲ್ಲಿ ಅವಿಭಕ್ತ ಕುಟುಂಬದ ಒಟ್ಟು ಆಸ್ತಿಯನ್ನು ಘೋಷಿಸಿದ್ದೆ. ಅಣ್ಣ, ತಮ್ಮಂದಿರ ಎಲ್ಲಾ ಆಸ್ತಿಯ ವಿವರವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿತ್ತು ಎಂದರು.

ನನ್ನ ಅಣ್ಣನ ನಿಧನದ ಬಳಿಕ ನಾನೇ ಮನೆಯ ಯಜಮಾನನಾಗಿದ್ದೆ. ಈಗ ಕುಟುಂಬದ ಆಸ್ತಿಯನ್ನ ವಿಭಜಿಸಲಾಗಿದೆ ಎಂದ ಸಿದ್ದರಾಮಯ್ಯ ಇದರ ಜತೆಗೆ ರಾಜ್ಯದ ಆರೂವರೆ ಕೋಟಿ ಜನ ನನ್ನ ಆಸ್ತಿಯಾಗಿದ್ದಾರೆ ಎಂದರು.

ಮಹಾದಾಯಿ ವಿಚಾರದಲ್ಲಿ ಗೋವಾ ಸರ್ಕಾರ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಾಪಸ್ ಪಡೆದಿದೆ. ನಾವು ಯಾವುದೇ ಕಾಮಗಾರಿ ನಡೆಸಿಲ್ಲ, ನ್ಯಾಯಾಂಗ ನಿಂದನೆ ಆಗಿಲ್ಲ ಎಂದು ನಾವು ಮೊದಲೇ ಹೇಳಿದ್ದರೂ ಕೇಳಲಿಲ್ಲ, ಈಗ ಅವರಿಗೆ ಗೊತ್ತಾಗಿ ಅವರಾಗಿಯೇ ನ್ಯಾಯಾಂಗ ನಿಂದನೆ ಅರ್ಜಿ ವಾಪಸ್ ಪಡೆದಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಪ್ರೇಮಿಗಳ ದಿನಾಚರಣೆಗೆ ವಿರೋಧ ಪ್ರೇಮಿಗಳ ಭಾವಚಿತ್ರ ದಹಿಸಿ ಪ್ರತಿಭಟನೆ

ಚಿತ್ರದುರ್ಗ

ಭಾರತೀಯ ಸಂಸ್ಕೃತಿಗೆ ಅಪಚಾರ ಮಾಡುವ ಪ್ರೇಮಿಗಳ ದಿನಾಚರಣೆ ವಿರೋಧಿಸಿ ಪ್ರೇಮಿಗಳ ಭಾವಚಿತ್ರ ದಹಿಸುವುದರ ಮೂಲಕ ಹಿಂದೂ ಯುವಸೇನೆ ವತಿಯಿಂದ ನಗರದ ಆನೆಬಾಗಿಲು ಬಳಿ ಪ್ರತಿಭಟನೆ ನಡೆಸಿದರು.

ಇಂದಿನ ಯುವಕ, ಯುವತಿಯರ ಫೆಬ್ರವರಿ-14 ರಂದು ವ್ಯಾಲೆಂಟೆನ್ಸ್‌ಡೇ ಆಚರಣೆ ಸಲುವಾಗಿ ಆಯೋಜಕರು ಏರ್ಪಡಿಸಿದ್ದ ಸ್ಥಳಗಳಲ್ಲಿ ಸೇರಿ ಅಸಂಬದ್ದವಾಗಿ ವರ್ತಿಸುವ ದಿನವನ್ನು ನಾವು ವಿರೋಧಿಸುತ್ತೇವೆ. ಆದರೆ ಯುವ ಪ್ರೇಮಿಗಳನ್ನಲ್ಲ, ಆದ್ದರಿಂದ ಪ್ರೇಮಿಗಳು ಪ್ರೇಮಿಸುವವರನ್ನು ಪ್ರೇಮಿಗಳ ದಿನದಂದು ಮದುವೆಯಾಗಿ ಪ್ರೇಮಿಗಳ ಮದುವೆಯ ದಿನವನ್ನಾಗಿ ಆಚರಿಸಬಹುದು, ಇತ್ತೀಚಿನ ದಿನಗಳಲ್ಲಿ ಪ್ರೇಮಿಗಳ ದಿನವನ್ನು ಬೆಂಬಲಿಸಿ ಹಲವಾರು ಸಂಘಟನೆಗಳು ರಾಜಕೀಯ ಪ್ರೇರಿತಗೊಂಡು ಹೇಳಿಕೆಗಳನ್ನು ನೀಡುತ್ತಿದ್ದು, ಅವರುಗಳು ಫೆಬ್ರವರಿ-14 ರಂದು ವಿದೇಶಗಳಲ್ಲಿ ಕಾಂಡೋಮ್‌ಗಳನ್ನು ಪ್ರೇಮಿಗಳಿಗೆ ವಿತರಿಸುವಂತೆ ಭಾರತದಲ್ಲೂ ಸಹ ವಿತರಿಸುವ ದಿನಗಳು ದೂರವೇನಿಲ್ಲ. ಇಂತಹ ಸಂಸ್ಕೃತಿ ನಮಗೆ ಬೇಕೇ ಎಂದು ಪ್ರತಿಭಟನಕಾರರು ಪ್ರಶ್ನಿಸಿದ್ದಾರೆ.

ಪ್ರೇಮಿಸುವ ಪ್ರೇಮಿಗಳು ಪ್ರತಿನಿತ್ಯ ನಿಮ್ಮ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ ಬಂಧು ಬಳಗವನ್ನು ಪ್ರೀತಿಸಿ ನಿಮ್ಮ ಪ್ರಿಯತಮೆ ಅಥವಾ ಪ್ರಿಯಕರನನ್ನು ಪ್ರತಿನಿತ್ಯ ಪ್ರೇಮಿಸಿ ವರ್ಷದಲ್ಲಿ ಒಂದು ದಿನ ಪ್ರೇಮ ಮಾಡುವುದು ವಿದೇಶಿ ಸಂಸ್ಕೃತಿ, ಪ್ರತಿನಿತ್ಯ ನಾಲ್ಕು ಗೋಡೆಗಳ ಮಧ್ಯೆ ಪ್ರೇಮಿಸುವುದು ಭಾರತೀಯ ಸಂಸ್ಕೃತಿ. ಈ ಕಾರಣಕ್ಕಾಗಿ ಪ್ರೇಮಿಗಳ ದಿನವನ್ನು ವಿರೋಧಿಸುತ್ತೇವೆ ಎಂದು ಹಿಂದೂ ಯುವಸೇನೆ ಜಿಲ್ಲಾಧ್ಯಕ್ಷ ಹಾಗೂ ನಗರಸಭೆ ನಾಮನಿರ್ದೇಶನ ಮಾಜಿ ಸದಸ್ಯ ಎನ್ .ಇ.ನಾಗರಾಜ್ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಹಿಂದೂ ಯುವಸೇನೆ ಕಾರ್ಯಕರ್ತರಾದ ಎ.ಸೀತಾರಾಮ್, ಪಿ.ಕೃಷ್ಣಮೂರ್ತಿ, ಬಿ.ಎಂ. ಜಗದೀಶ್, ಮೋಹನ್, ರಮೇಶ್ ಬಾಬು, ಇನ್ನು ಅನೇಕರು ಪಾಲ್ಗೊಂಡಿದ್ದರು.

ಋತುಚಕ್ರ ಕುರಿತು ಜಾಗೃತಿ ಕಾರ್ಯಕ್ರಮ

ದಾವಣಗೆರೆ

ನಗರದ ಡಿ.ಆರ್.ಆರ್ ಶಾಲೆಯಲ್ಲಿ ಇತ್ತೀಚೆಗೆ ಅಂತರ್‌ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಿಂದ ಲ್ಯಾಂಡ್ಮಾರ್ಕ್ ಸೆಲ್ಫ್ ಅಂಗವಾಗಿ ಋತುಚಕ್ರ ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಮಂಜುಳಾ ಶರತ್ ಮಾತನಾಡಿ, ಪ್ರೌಢಾವಸ್ಥೆ ತಲುಪಿದ ಹುಡುಗಿಯರಿಗೆ ತಮ್ಮ ಮಾಸಿಕ ಚಕ್ರದಲ್ಲಿ ತರಗತಿಗಳಲ್ಲಿ ಫಾಸಿಗೊಳಿಸುವ ಅನುಭವ ಆಗಲಿದೆ. ಕಡಿಮೆ ಮುಟ್ಟಿನ ಅರಿವು ಮತ್ತು ಮಾತನಾಡಲು ಸೂಕ್ಷ್ಮ ಮತ್ತು ಮುಜುಗರದ ವಿಷಯವಾಗಿದ್ದರಿಂದ ಮಾತನಾಡಲು ಬಯಸುವುದಿಲ್ಲ, ಆದ್ದರಿಂದ ಅವರಿಗೆ ಮಾರ್ಗದರ್ಶನ ಮಾಡುವದರಿಂದ ಅವರಲ್ಲಿರುವ ಆತಂಕ ದೂರವಾಗಲಿದೆ ಎಂದರು.

ಕಡಿಮೆ ಆದಾಯದ ಕುಟುಂಬಗಳು ತಮ್ಮ ಋತುಚಕ್ರದ ಅವಧಿಯಲ್ಲಿ ಶಾಲೆಗೆ ಹೊಗಲು ಸಾಧ್ಯವಿಲ್ಲ ಕೆಲವೊಂದು ಶಾಲೆಗಳಲ್ಲಿ ಪ್ಯಾಡ್ಗಳು ಸಿಗುವುದಿಲ್ಲ ಆದ್ದರಿಂದ ಬಟ್ಟೆಯನ್ನು ಉಪಯೋಗಿಸುತ್ತಾರೆ ಅದರಿಂದ ಅನಾರೋಗ್ಯ ಉಂಟಾಗುತ್ತದೆ.

ಕೆಲ ಶಾಲೆಯಲ್ಲಿ ಮಕ್ಕಳು ಸ್ಯಾನಿಟರಿ ಪ್ಯಾಡನ್ನು 7 ರಿಂದ 8 ಘಂಟೆಗಳ ಕಾಲ ಉಪಯೋಗಿಸುವದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುತ್ತದೆ ಎಂದು ಹೇಳಿದರು.

ಮುಂದಿನ ದಿನಗಳಲಿ ಆರೋಗ್ಯದ ಜಾಗೃತಿ ಮತ್ತು ಮನಶಾಂತಿಗಾಗಿ ಋತುಮಾನದ ಅವಧಿಯಲ್ಲಿ ಋತುಚಕ್ರದ ಬಗ್ಗೆ ಮಾತನಾಡಲು ಬಾಹ್ಯಾಕಾಶ ಮತ್ತು ವಿಶ್ವಾಸವನ್ನು ಕಲ್ಪಿಸಿಕೊಡಬೇಕು.

ಋತುಚಕ್ರದ ಸಮಯದಲ್ಲಿ ಹೆಣ್ಣು ಮಕ್ಕಳನ್ನು ಬೆಂಬಲಿಸಲು ಪ್ರತಿ ಶಾಲೆಯಲ್ಲಿ ಜೈವಿಕ ಪ್ಯಾಡ್ಗಳನ್ನು ಹೊಂದಿರುವ ಸ್ಯಾನಿಟಿ ಕಿಟ್ ಲಭ್ಯವಿರುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಗೌರಿ ಹಾಜರಿದ್ದರು.

ವಿಶ್ವಕರ್ಮ ಸಮುದಾಯಕ್ಕೆ ಆಯವ್ಯಯದಲ್ಲಿ

300 ಕೋಟಿ ಮೀಸಲಿಡಲು ಸಿಎಂಗೆ ಸಮುದಾಯದ ಮನವಿ

ಚಳ್ಳಕೆರೆ

ವಿಶ್ವಕರ್ಮ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ತು ಸಮುದಾಯಕ್ಕೆ ಆರ್ಥಿಕ ಶಕ್ತಿಯನ್ನು ತುಂಬುವ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರದ ಆಯವ್ಯಯದಲ್ಲಿ 300 ಕೋಟಿಯನ್ನು ಮೀಸಲಿಡಬೇಕೆಂದು ಒತ್ತಾಯಿಸಿ ರಾಷ್ಟ್ರೀಯ ವಿಶ್ವಕರ್ಮ ಸಮಾಜಾಭಿವೃದ್ಧಿ ಸಂಘ ರಾಜ್ಯದ ಮುಖ್ಯಮಂತ್ರಿಗಳಿಗೆ ಶಾಸಕ ಟಿ.ರಘುಮೂರ್ತಿರ ಮೂಲಕ ಮನವಿ ಮಾಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ತಾಲ್ಲೂಕು ಅಧ್ಯಕ್ಷ ಡಿ.ವೆಂಕಟೇಶ್ವರಚಾರ್, ಈಗಾಗಲೇ ಸರ್ಕಾರ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ ನಿಗಮವನ್ನು ಸ್ಥಾಪಿಸಿದ್ದು, ನಿಗಮದ ಮೂಲಕ ವಿಶ್ವಕರ್ಮ ಸಮಾಜದ ಅಭಿವೃದ್ಧಿಗೆ ಪ್ರಯತ್ನ ನಡೆಸುತ್ತಿದ್ದರೂ ಹೆಚ್ಚಿನ ನೆರವು ದೊರಯದ ಕಾರಣ ಪ್ರಗತಿಯತ್ತ ಈ ಸಮುದಾಯ ಹೆಜ್ಜೆ ಇಡಲು ಅಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ತಿಂಗಳ 16ರಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಮಂಡಿಸಲಿದ್ದು, ಜನಾಂಗದ ಅಭಿವೃದ್ಧಿಗಾಗಿ ಕನಿಷ್ಠ ಪಕ್ಷ 300 ಕೋಟಿರೂಗಳನ್ನು ನೀಡುವಂತೆ ಶಾಸಕ ಮೂಲಕ ಮುಖ್ಯಮಂತ್ರಿಗಳನ್ನು ಒತ್ತಾಯ ಪಡಿಸಲಾಗಿದೆ ಎಂದರು.

ರಾಜ್ಯದಲ್ಲಿ ವಿಶ್ವಕರ್ಮ ಸಮುದಾಯ ಐದಕ್ಕೂ ಹೆಚ್ಚು ಉಪಕಸುಬುಗಳ ಮೂಲಕ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದು, ಇಂದಿನ ಪರಿಸ್ಥಿತಿಯಲ್ಲಿ ಉಪಕಸುಬುಗಳು ಸಮುದಾಯಕ್ಕೆ ಆರ್ಥಿಕ ಚೇತನವನ್ನು ನೀಡಲು ಸಾಧ್ಯವಾಗಿಲ್ಲ. ಕೇವಲ ಬೆಳ್ಳಿ, ಬಂಗಾರದ ವ್ಯಾಪಾರದ ಮೂಲಕ ಹೆಚ್ಚು ಲಾಭಗಳಿಸಲು ಸಾಧ್ಯವೇ ಇಲ್ಲ.

ಗ್ರಾಮೀಣ ಭಾಗಗಳಲ್ಲಿ ಮರಗೆಲಸ ಹಾಗೂ ಕಬ್ಬಿಣದ ಕೆಲಸ ಹಾಗೂ ಕೃಷಿ ಕೆಲಸ ಕಾರ್ಯಗಳಲ್ಲಿ ಸಮುದಾಯದವರು ಕಾರ್ಯನಿರ್ವಹಿಸಿದ್ದು, ಅವರ ಸ್ಥಿತಿ ಶೋಚನಿಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ವಿಶ್ವಕರ್ಮ ಸಮಿತಿ ತಾಲ್ಲೂಕು ಅಧ್ಯಕ್ಷ ಆರ್.ಪ್ರಸನ್ನಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಆರ್.ಕಮಲಮ್ಮ, ವಿಶ್ವಕರ್ಮ ಅಭಿವೃದ್ಧಿ ನಿಗಮದ ನಿರ್ದೇಶಕ ಎಸ್.ನಾಗೇಂದ್ರಚಾರ್, ಚಿನ್ನಬೆಳ್ಳಿ ವರ್ತಕರ ಸಂಘದ ಅಧ್ಯಕ್ಷ ಬಿ.ಜಿ.ಶಶಿಕುಮಾರ್, ಮಾಜಿ ಅಧ್ಯಕ್ಷ ಮಂಜುನಾಥಚಾರ್, ಯುವ ವೇದಿಕೆ ಅಧ್ಯಕ್ಷ ಶ್ರೀನಿವಾಸ್‌ಚಾರ್ ಮುಂತಾದವರು ಉಪಸ್ಥಿತರಿದ್ದರು.

ರಾಹುಲ್ ಗಾಂಧಿಯವರಿಂದ ಗುಲಬರ್ಗಾ ಖ್ವಾಜಾ ಬಂದನೆ ವಾಜರವರ ದರ್ಗಾ ದರ್ಶನ

ಸಿರುಗುಪ್ಪ

ಹೈದರಬಾದ ಕರ್ನಾಟಕದ ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ಗುಲಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಜನಾಶೀರ್ವಾದ ಯಾತ್ರೆ ಕೈಗೊಳ್ಳುತ್ತಾ, ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿ ಅಧ್ಯಕ್ಷರಾದ ರಾಹುಲ್ ಗಾಂಧಿ ಅವರು ದಕ್ಷಿಣಭಾರತದ ಖ್ಯಾತ ಹಜರತ್ ಖ್ವಾಜಾ ಬಂದಾನವಾಬ್ ದರ್ಗಾಕ್ಕೆ ತೆರಳಿ ಜಿಯಾರತ್ ದರ್ಶನ ಆಶೀರ್ವಾದ ಪಡೆದರು, ಗುಲಬರ್ಗಾದಲ್ಲಿ ಸಜ್ಜಾದ ನಷೀನ್ ಹಜರತ್ ನವದೆಹಲಿಯ ನಿಜಾಮುದ್ದೀನ್ ಔಲಿಯಾ ದರ್ಗಾದ ಖ್ವಾಜಾ ಮೊಹಮ್ಮದ್ ನಿಜಾಮಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ. ಜಿ.ಪರಮೇಶ್ವರ, ಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಮಂತ್ರಿಗಳಾದ ಆರ್.ರೋಷನ್ ಬೇಗ್ ಮತ್ತು ಕಾಂಗ್ರೆಸ್ ಮುಖಂಡರು ಇನ್ನಿತರರು ಇದ್ದರು.

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಹೊಸಪೇಟೆ

ಕ್ರಿಮಿನಲ್ ಎಂ.ಸಿ.ನಂ.437/2017

ಹೆಚ್.ಗಂಗಮ್ಮ ಮತ್ತು ಇತರರು ಅರ್ಜಿದಾರರು: ವಿರುದ್ಧ ಮಾನ್ಯ ತಹಶಿಲ್ದಾರರು, ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಾಲ್ಲೂಕು ಕಛೇರಿ, ಹೊಸಪೇಟೆ. ಎದುರುದಾರರು

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರಾದ 1. ಶ್ರೀಮತಿ ಗಂಗಮ್ಮ, ಗಂಡ ದಿವಂಗತ ದೊಡ್ಡ ಯಂಕಪ್ಪ, ವಯಸ್ಸು 65 ವರ್ಷ, 2.ಹೆಚ್ ಫಕ್ಕೀರ್ ಸ್ವಾಮಿ, ತಂದೆ ದಿವಂಗತ ದೊಡ್ಡ ಯಂಕಪ್ಪ, 37 ವರ್ಷ, 3. ಹೆಚ್. ಶೇಖರಪ್ಪ, ತಂದೆ ದೊಡ್ಡ ಯಂಕಪ್ಪ, 35 ವರ್ಷ, 4. ಸಣ್ಣ ಯಂಕಪ್ಪ, ತಂದೆ ಗುಂಡೂರಪ್ಪ, 52 ವರ್ಷ, ಎಲ್ಲರ ವಾಸ: ಕಾಕುಬಾಳು ಗ್ರಾಮ, ಇವರು ಅರ್ಜಿದಾರ ನಂ.1 ಇವರ ಅತ್ತೆ, ಅರ್ಜಿದಾರ ನಂ.2 ಮತ್ತು 3 ಇವರ ಅಜ್ಜಿ, ಮತ್ತು ಅರ್ಜಿದಾರ ನಂ.4 ಇವರ ತಾಯಿಯಾದ ಶ್ರೀಮತಿ ಯಲ್ಲಮ್ಮ, ಗಂಡ: ಗುಂಡೂರಪ್ಪ, ವಾಸ ಕಾಕುಬಾಳು ಗ್ರಾಮ, ಇವರು ದಿನಾಂಕ 8-7-1978 ರಂದು ಅರ್ಜಿದಾರರ ಸ್ವಗೃಹದಲ್ಲಿ ಕಾಕುಬಾಳು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆಂದು, ಸದರಿ ಯವರ ಮರಣ ದಿನಾಂಕವನ್ನು ನೊಂದಾಯಿಸದ ಕಾರಣ, ಸದರಿ ಯವರ ಮರಣ ಪತ್ರವನ್ನು ಪಡೆಯಲು ಎದರುದಾರರಿಗೆ ಸೂಕ್ತ ಆದೇಶವನ್ನು ನೀಡಲು ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದ್ರಿ ಅರ್ಜಿಯ ಸಂಖ್ಯೆ ಕ್ರಮಿನಲ್ ಎಂ.ಸಿ. 437/2017 ಇರುತ್ತದೆ., ಸದರಿ ಅರ್ಜಿಯ ದಿನಾಂಕ 23-02-18 ರಂದು ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಿದ್ದು, ಸದ್ರಿ ಅರ್ಜಿಗೆ ಸಂಬಂಧಪಟ್ಟ ಯಾರದೇ ಆದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ 05-02-18ರಂದು ಘನ ನ್ಯಾಯಾಲಯದ ಆದೇಶವನ್ನು ಸಹಿ ಮತ್ತು ಮೊಹಿರುನೊಂದಿಗೆ ನೀಡಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/- ಶಿರಸ್ತೇದಾರ್
ಅಪರ ಹಿರಿಯ ಸಿವಿಲ್ ನ್ಯಾಯಾಧಿಶರು &
ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಪೇಟೆ

ಶ್ರೀ ಎ. ಎರಿಸ್ವಾಮಿ
ವಕೀಲರು, ಹೊಸಪೇಟೆ

IN THE COURT OF THE HON'BLE CIVIL JUDGE AND JMFC AT KUDLIGI

CRI Misc NO 834/2017

Between **1) Smt. Khaseemabee** W/o late Honnur Sab, aged about 65 years **2) Smt, Pathimabee** W/o late Imam Sab, aged about 63 years, **3) Smt. Ashaabee** W/o late Peera Sab, aged about 55 years, 4) Mabu Sab S/o late Sukaligara Sali Sab, aged about 60 years, **5) Honnur Sab** S/o late Khaseem Sab, aged about 60 years, **6) Bade Sab** S/o late Khaseem Sab, aged about 50 years, **7) Smt. Saleemabee** W/o late Raja Sab, aged about 50 years. Petitioners All are Hindus, agriculturist, resident of Beeralagudda Village, in Kudligi Taluk, Ballari District And T**he Tahasildar Taluk, Office, Kudligi Respondent**

SUMMONS TO INTERESTED PERSON U/O RULE 20(A) R/W SEC 151 OF CPC FILED ON BEHALF OF THE PETITIONERS

Wheres the above petitioners have institituted above petition to get the death certificate of their deceased petitioner No-1 to 3's mother-in-law, petitioner No-4's mother, and **petitioner** No-5 to 7's grandmother by name **late Sukaligara** Jangalavva W/o late Sukaligara Salisab, was d**ied on 01-041972** at Beeralagudda village, on **the file of the civil judge & JMFC at Kudligi,** The chief Officer Town panchayath Kudligi in the respindent. The interested person are hereby summoned to appear in this court in person or by pleader duly instructed and able to answer all material question relating to the above petition **on 21-02-2018 at 11.00 A.M.** and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this this Hon'ble court on **07-02-2018**

By order of the court

Sd/- Chief Ministerial
Officer Civil Judge
(J.D) court Kudligi

K.Muganna,
Advocate, Kudligi